ಶ್ರೀ ಸಿ.ಟಿ.ರವಿ : ರಾಜ್ಯಪಾಲರ ಭಾಷಣಕ್ಕೂ ಇವರಿಗೆ ಗೌರವವಿಲ್ಲ.

ಅಧ್ಯಕ್ಷರು : ನಾನು ನಿಂತಿದ್ದೇನೆ. ನೀವು ಮಾಡುವ ಕೆಲಸವನ್ನು ನಾನೇ ಮಾಡುತ್ತೇನೆ. ದಯವಿಟ್ಟು ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸದನ ಪ್ರಾರಂಭವಾದ ತಕ್ಷಣ ತಾವು ತಪ್ಪದೆ ಬಂದು ಕುಳಿತಿರಬೇಕು. ದಯವಿಟ್ಟು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು system ಗೆ adhere ಆಗೋಣ. ಹೀಗೆ ಆಗಕೂಡದು. ನೋಡಿ, ಎಲ್ಲಾ ಪೀಠಗಳು ಖಾಲಿಯಿವೆ. ಇದರ ಅರ್ಥವೇನು ಗೊತ್ತೇ?

(ಗೊಂದಲ)

ಅಧ್ಯಕ್ಷರು : ಶೆಟ್ಟರ್‌ರವರೆ, ನೀವು ಈ ಜಾಗದಲ್ಲಿ ಕುಳಿತು ಕೆಲಸ ಮಾಡಿದವರು. ನೀವೇ ಹೀಗೆ ಮಾಡಿದರೆ ಹೇಗೆ? please ನಿಮಗೆ ಏನು ಅನಿಸುತ್ತಿದೆ, ನನಗೂ ಅದೇ ಅನಿಸಿದೆ, ಅದನ್ನೇ ಹೇಳಿದ್ದೇನೆ. ಇನ್ನು ಮುಂದೆ ತಪ್ಪದೆ ಬಂದು ಹಾಜರಿರುವುದಕ್ಕೆ ನಾನು ಏನು ಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ದಯವಿಟ್ಟು ಅದರ ಬಗ್ಗೆ ತಾವು ಆತಂಕ ಇಟ್ಟುಕೊಳ್ಳಬೇಡಿ. ದಯಮಾಡಿ ನೀವುಗಳು ಸಹಕರಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇವರು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದಾದರೆ ತಾವು ಸದನವನ್ನು ಮುಂದಕ್ಕೆ ಹಾಕಿ ಸೂಕ್ತವಾದ ಹಾಗೂ ಗಂಭೀರವಾದ ಸಂದೇಶವನ್ನು ಕಳುಹಿಸಬೇಕು. ರಾಜ್ಯದ ಜನತೆಗೆ ಈ ಸರ್ಕಾರದ ಬಗ್ಗೆ ಗೋತ್ತಾಗಬೇಕು. ಅದಕ್ಕಾಗಿ ತಾವು ಸದನವನ್ನು ಮುಂದಕ್ಕೆ ಹಾಕಿ. ಅವರು ಪುರಸೊತ್ತು ಮಾಡಿಕೊಂಡು ಬರಲಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕೆಲವರಿಗೆ ಪ್ರಮಾಣ ವಚನ ಸ್ವೀಕಾರ ಮಾಡಲೂ ಪುರುಸೊತ್ತು ಇಲ್ಲ. ಇದುವರೆಗೂ ಬಂದಿಲ್ಲ ಅವರು. ಪರಿಸ್ಥಿತಿ ಏನಿದೆ, ಎಂಬುದು ಅರ್ಥವಾಗುತ್ತದೆ.

ಅಧ್ಯಕ್ಷರು : ಅವರ right ಅದು. ಪ್ರಮಾಣ ವಚನ ತೆಗೆದುಕೊಳ್ಳಬೇಕೋ, ಬೇಡವೋ ಎಂಬುದು ಅವರ right ಬೇಕಾದರೆ ತೆಗೆದುಕೊಳ್ಳುತ್ತಾರೆ. ಬೇಡದಿದ್ದರೆ ಬಿಡುತ್ತಾರೆ ಅಷ್ಟೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನಾವು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲವಲ್ಲ ತಾವು.

ಅಧ್ಯಕ್ಷರು : ಅವರು ಎದ್ದು ನಿಂತಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ : ನೀವು ಏನು ಮಾತನಾಡುತ್ತೀರಿ? ನಿಮ್ಮ ಸದಸ್ಯರನ್ನು ಕರೆದುಕೊಂಡು ಬಂದು ಕುಳಿತು ಮಾತನಾಡಿ.

(ಗೊಂದಲ)

ಅಧ್ಯಕ್ಷರು : ನೀವು ಏನು ಹೇಳಬೇಕೋ, ಅದನ್ನು ನಾನು ಹೇಳಲಿಲ್ಲವೇ?

ಶ್ರೀ ಆರ್.ಅಶೋಕ್ : ಅಧ್ಯಕ್ಷರೆ, ತಾವು ಅವರಿಗೆ ಸ್ವಲ್ಪ ಹೇಳಬೇಕು. ಈಗಿನಿಂದಲೇ ಕಿವಿ ಹಿಂಡಬೇಕು. ಮೊದಲ ಅಧಿವೇಶನದ ಮೊದಲ ದಿನ. ನಿನ್ನೆ ರಾಜ್ಯಪಾಲರ ಭಾಷಣ. ಅವರು ಏನು ಹೇಳಬೇಕೋ, ಗೌರವಾನ್ವಿತ ರಾಜ್ಯಪಾಲರ ಮುಖಾಂತರ ಇಡೀ ರಾಜ್ಯಕ್ಕೆ ಹೇಳಬೇಕು. ಮೊದಲ ಸಾಲಿನಲ್ಲಿ ಮಂತ್ರಿಗಳು ಇರಲಿಲ್ಲ. ಹಿಂದೆ ಕುಳಿತಿರುವ ಬೇರೆ ಬೇರೆ ಮಂತ್ರಿಗಳನ್ನು ಕರೆದು ಮೊದಲ ಸಾಲಿನಲ್ಲಿ ಕೂರಿಸುತ್ತಾರೆಂದರೆ, ದಿವಾಳಿ ಎದ್ದು ಹೋಗಿದೆ ಈ ಸರ್ಕಾರ. ಈಗಲೇ ಹೊಡೆದಾಟ, ಬಡಿದಾಟ ಎಲ್ಲವೂ ಪ್ರಾರಂಭವಾಗಿದೆ. ನಾವು ಅಧಿಕಾರದಲ್ಲಿದ್ದಾಗ ಒಬ್ಬರು ಇಲ್ಲವೆಂದರೆ, ಕೂಗಾಡುತ್ತಿದ್ದರು.

ಅಧ್ಯಕ್ಷರು : ಅವರು ನಿಂತಿದ್ದಾರೆ. ಸಾಕು, ಹೇಳಿದ್ದೀರಲ್ಲ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೆ, ಇವತ್ತಿನ ಕಾರ್ಯಕಲಾಪದ ಪಟ್ಟಿಯಲ್ಲಿ ಬಂದಿರುವುದು ಯಾವುದು? ಪ್ರಮಾಣ ವಚನ ಸ್ವೀಕಾರ ಮಾಡುವುದು. ಪ್ರಮಾಣ ವಚನ ಸ್ವೀಕಾರ ಮಾಡಬೇಕಾದಂತಹ ಸದಸ್ಯರು ಬಂದಿದ್ದಾರೆ, ಅವರು ಸ್ವೀಕಾರ ಮಾಡಲಿ. ತದನಂತರ ಎಲ್ಲರೂ ಕೂಡಾ ಬರುತ್ತಾರೆ. ಈಗ ಮುಖ್ಯಮಂತ್ರಿಗಳು ಬಂದರು. ಈಗ ಪ್ರಮಾಣ ವಚನ ಸ್ವೀಕಾರ ಮಾಡುವುದು ಪ್ರಾರಂಭವಾಗಲಿ. ತಾವು ಪೀಠದಿಂದ ಕೊಟ್ಟಿರುವ ಸೂಚನೆ ಏನಿದೆ, ಅದನ್ನು ನಾವು ಆದೇಶ ಎಂದು ಪರಿಪಾಲನೆ ಮಾಡುತ್ತೇವೆ. ಇನ್ನು ಮುಂದೆ ಯಾವುದೇ ಸಂದರ್ಭದಲ್ಲಿಯೂ ಕೂಡಾ ಸದನ ಪ್ರಾರಂಭವಾಗುವುದಕ್ಕೆ ಮೊದಲು ಮುಂದಿನ ಸಾಲಿನಲ್ಲಿ ಎಲ್ಲಾ ಮಂತ್ರಿಗಳು ಹಾಜರಿರುತ್ತಾರೆಂಬ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಸದಸ್ಯರ ಪ್ರಮಾಣ ವಚನ.